**<u>ದಿನಾಂಕಃ 05-12-2023 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ</u>**

ನನಗೆ ಕನ್ನಡ ಓದಲು ಬರೆಯಲು ಬರುವುದಿಲ್ಲ. ದೂರನ್ನು ನನ್ನ ಅಣ್ಣ ಬರೆದಿದ್ದಾನೆ. ನನ್ನ ಅಣ್ಣ ಶಿವಮೊಗ್ಗದಿಂದ ನನ್ನ ಜೊತೆ ನನ್ನ ವಾಹನದಲ್ಲಿ ಬರುತ್ತಿರಲಿಲ್ಲ. ನನ್ನ ಅಣ್ಣ ಬರೆದ ದೂರಿಗೆ ಸಹಿ ಮಾಡಿದ್ದೇನೆ ಎಂದರೆ ಸರಿ. ಅದರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಾನು ಶಿವಮೊಗ್ಗದಿಂದ ಬರುತ್ತಿರುವಾಗ ನನ್ನ ಮುಂದೆ ಮತ್ತು ಹಿಂದುಗಡೆ ಸಾಕಷ್ಟು ವಾಹನಗಳ ಸಂಚಾರ ಇತ್ತು ಎಂದರೆ ಸರಿ. ನಾನು ಒಂದು ಕಾರು ವೇಗವಾಗಿ ಚಲಾಯಿಸಿಕೊಂಡು ಬಂದು ನನ್ನ ವಾಹನಕ್ಕೆ ಡಿಕ್ಕಿ ಪಡಿಸಿತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳಿದ ರೀತಿ ನನ್ನ ವಾಹನಕ್ಕೆ ಯಾವುದೇ ಕಾರಿನಿಂದ ಅಪಘಾತ ಆಗಿಲ್ಲ ಎಂದರೆ ಸರಿಯಲ್ಲ. ಬೈಕ್ ಚಾಲಕ ನನ್ನ ವಾಹನಕ್ಕೆ ಡಿಕ್ಕಿ ಹೊಡೆದಿದ್ದಾನೆ ಎಂದರೆ ಸರಿಯಲ್ಲ. ಚಾಸಾ-5 ರವರ ವಿರುದ್ಧ ದೂರು ಕೊಡದೇ ಆರೋಪಿಯ ವಿರುದ್ದ ಸುಳ್ಳು ದೂರು ನೀಡಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಸಂಬಂಧವಿಲ್ಲ ಎಂದರೆ ಸರಿಯಲ್ಲ.

**<u>ಮರುವಿಚಾರಣೆ :</u>** ಇಲ್ಲಃ

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

***ಓ ಹೇ ಕೇ ಸ ಇ ಎ ಒ***

**Sd/-**

***ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಧಾನ***
***ಪ್ರ.ದ.ನ್ಯಾ.ದಂ., ರವರ ನ್ಯಾಯಾಲಯ, ತರೀಕೆರೆ.***